ಶ್ರೀ ವೀರೇಂದ್ರ ಪಾಟೀಲ್.—ರೇಟುಗಳನ್ನೆಲ್ಲಾ ನಾವೇ ಡಿಸ್ಪೈಡ್ ಮಾಡುತ್ತೇವೆ. ಇದೂ ಒಂದು ರೀತಿಯಾಗಿ ಕಂಟ್ರಾಕ್ಟ್ ಎಂತಲೇ ಆಗುತ್ತದೆ. ನಮ್ಮ ಕೇಸಿನಲ್ಲಿ ಇವರನ್ನು ನೇಮಿಸುವಾಗ ಶ್ರೀ ದಾತಾರರವರು ಹೈ ಕೋರ್ಟಿನಲ್ಲಿ ಇರುವ ಒಬ್ಬರು ಸೀನಿಯರು ಅಡ್ವಕೇಟರಾದುದರಿಂದ, ಇವರನ್ನು ನಂಬಿಯಾರರವರಿಗೆ ಅಸಿಸ್ಟ್ ಮಾಡುವುದಕ್ಕಾಗಿ ನೇಮಿಸಲಾಗಿತ್ತು. ಆರೀತಿ ಇವರು ಅಸಿಸ್ಟ್ ಮಾಡಿದ್ದಾರೆ.

Sri S. SIVAPPA.—May I know the reasons for one lawyer getting nearly 60 per cent of the amount that has been spent ? What are the special considerations to give him so much ?

Mr. DEPUTY SPEAKER.—It has already been replied.

Sri S. SIVAPPA.—Was there not a border Committee appointed by the Government to collect the various literatare and several lakhs of rupees have been spent on that Committee, in addition to this ? Where was the necessity for appointing these advocates ?

Sri VEERENDRA PATIL.—The Border Committee is constituted only to collect information, prepare the case and give necessary information for argument of the case before the Commission. But, these are the advocates whom the Government had appointed to argue our case. So far as Sri Nambyar is concerned, he is one of our eminent advocates today in the country, and in order to safeguard the interests of Mysore State, it is necessary to have a top-rank advocate of the country, even if it is a question of paying more money.

ಶ್ರೀ ಮಹದೇವ್ ಜಿ. ಬಣಕಾರ್.—ಸ್ವಾಮಿ, ನೇಚರ್ ಆಫ್ ದಿ ಕೇಸನ್ನು ನಾವು ಅಭ್ಯಾಸ ಮಾಡಿದರೆ ಏನು ಎನ್ನುವುದು ಅರ್ಥವಾಗುತ್ತದೆ. ಈ ಕೇಸು ಇರುವುದು ನಿಪ್ಪಾಣಿ ಪುರಸಭೆಯಲ್ಲಿ ಕನ್ನಡಿಗರಿಗೆ ಹಾಗೂ ಮುಸ್ಲಿಮರಿಗೆ ಅನ್ಯಾಯ ಮಾಡಿ ಅವರು ಆರಿಸಿ ಬರಲು ಸಾಧ್ಯವಾಗದಂತೆ ವಾರ್ಡುಗಳನ್ನು ಮರಾಠಿಗರು ಪುನರ್ರಚಿಸಿದ್ದರು. ಅದನ್ನು ವಿರೋಧಿಸಿ ಕನ್ನಡಿಗರು ರಿಟ್ ಹಾಕಿದ್ದರು. ಇದರ ವಿರುದ್ಧವಾಗಿ ಶ್ರೀ ದಾತಾರ್ ಅವರು ಮಹಾರಾಷ್ಟ್ರೀಯರ ಪರ ವಕಾಲತ್ತು ವಹಿಸಿ ಈ ಕೇಸನ್ನು ವಾದಿಸಿದ್ದಾರೆ. ಈ ರೀತಿ ಅವರ ಪರ ವಾದಿಸಿದ್ದರಿಂದ ಕನ್ನಡಿಗರಿಗೆ ಅನ್ಯಾಯವಾದಂತಾಗಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಆ ಕೇಸು ಇತ್ಯರ್ಥವಾಗಿದೆ. ನಿಪ್ಪಾಣಿ ಎಲೆಕ್ಷನ್ ಆಗುವುದಕ್ಕಿಂತ ಮುಂಚಿತವಾಗಿ ವಾರ್ಡ್‌ನ ವಿಲೇವಾರಿ ಆಯಿತು. ಆ ನೋಟಿಫಿಕೇಷನ್ ಸರಿಯಾಗಿತ್ತೋ ಇಲ್ಲವೋ ಅದು ಹೈಕೋರ್ಟ್‌ನಲ್ಲಿ ಇತ್ಯರ್ಥವಾಗಿದೆ. ಅದರ ಪರಿಶೀಲನೆಗೆ ಬಂದಾಗ ಕೆಲವರ ಪರವಾಗಿ ಶ್ರೀಮಾನ್ ದಾತಾರ್‌ರವರು ವಕಾಲತ್ತು ವಹಿಸಿದ್ದಾರೆ. ನೋಟಿಫಿಕೇಷನ್ ಕೂಡ ಸೆಟ್‌ಅಸೈಡ್ ಆಗಿದೆ. ಆ ಪ್ರತಿವಾದಿಗಳು ಮಹಾರಾಷ್ಟ್ರೀಯರೇ ಎಂಬುದು ಸರ್ಕಾರಕ್ಕೆ ಗೊತ್ತಿಲ್ಲ. ನಿಪ್ಪಾಣಿ ಮುನಿಸಿಪಲ್ ಎಲೆಕ್ಷನ್‌ಗೆ ಕಂಟೆಸ್ಟ್ ಮಾಡುವ ಅಧಿಕಾರ ಪ್ರತಿಯೊಬ್ಬರಿಗೂ ಇದೆ. ಎಲೆಕ್ಷನ್ ಪೂರ್ವದಲ್ಲಿ ವಾರ್ಡ್‌ನ ವಿಲೇವಾರಿ ಸರಿಯಾಗಿದೆಯೋ ಇಲ್ಲವೋ ಅದನ್ನು ನೋಡಿಕೊಂಡು ಸರಿಯಾಗದೇ ಇದ್ದರೆ ಅದನ್ನು ಥಾರೇಂಜ್ ಮಾಡುವ ಅಧಿಕಾರ ಎಲ್ಲರಿಗೂ ಇದೆ.

## Loans and Subsidies granted to Ranibennur Taluk Agricultural Produce Co-operative Marketing Society

560. Sri N. L. BELLAD (Ranibennur).—

Will the Minister for Development be pleased to state :—

(*a*) the amount of loan and subsidy given by them to Ranibennur Taluk Agricultural Produce Co-operative Marketing Society, so far ;

(*b*) the purposes for which these loans and subsidies have been given (detailed information may please be given) ;

(*c*) out of the amount of loan so given the amount of money that has been repaid ;

(*d*) whether the amount of loan sanctioned has been utilised for the purpose for which it has been sanctioned ?

**Sri B. L. GOWDA** (Deputy Minister for Co-operation).—

(*a*) The Government has given Rs. 1,20,625 by way of loan and Rs. 79,139 by way of subsidy to the said Society.

(*b*) The loan and subsidy have been given to the Society for the following purposes :—

| | *Loan* | *Subsidy* | *Purpose* |
|---|---|---|---|
| 1 | 15,000 | 5,000 | Warehouse |
| 2 | 15,000 | 5,000 | Do |
| 3 | 11,250 | 3,750 | Do |
| 4 | 37,500 | 12,500 | Do |
| 5 | 9,375 | 3,125 | Do |
| 6 | 32,500 | ... | For purchase of lorry. |
| 7 | ... | 300 | Outright purchase. |
| 8 | ... | 30,964 | Fluctuation in prices. |
| 9 | ... | 5,000 | For distribution of consumer goods. |
| 10 | ... | 5,500 | For classification, equipment and staff. |
| 11 | ... | 5,000 | Change over staff. |
| 12 | ... | 3,000 | Staff and marketing. |
| | 1,20,625 | 79,139 | |

(*c*) Rs. 18,750.

(*d*) Yes.

ಶ್ರೀ ಎನ್. ಎರ್. ಬೆಲ್ಲದ.—ಸ್ವಾಮಿ, (ಅ)ಗೆ ಉತ್ತರವಾಗಿ ಐಟಂ.ನಂ. 8ರಲ್ಲಿ ದರಗಳ ಏರಿಳಿತಕ್ಕೆ ಎಂದು 30,964 ರೂಪಾಯಿ ಧನ ಸಹಾಯ ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಯಾವ ಪಸ್ತುಗಳ ದರಗಳ ಏರಿಳಿತಕ್ಕೆ ಧನ ಸಹಾಯ ಮಾಡಿದ್ದೀರಿ ?

† ಶ್ರೀ ಬಿ. ಎರ್. ಗೌಡ.—ದಿನಸಿಗಳ ವ್ಯವಹಾರ ಮಾಡುತ್ತಾ ಇರುವುದಕ್ಕೆ ಇದನ್ನು ಉಪಯೋಗಿಸಬೇಕು ಎಂದು ಕೊಟ್ಟಿದ್ದೇವೆ.

ಶ್ರೀ ಎನ್. ಎರ್. ಬೆಲ್ಲದ.—ಸೊಸೈಟಿಗಳು, ಸಹಕಾರ ಸಂಘಗಳು ದಿನಸಿ ವ್ಯವಹಾರ ಮಾಡತಕ್ಕಂಥವರಿಗೆ ಧನಸಹಾಯ ಒದಗಿಸಿದ್ದೀರಿ. ಅದೇರೀತಿ ಬೇರೆ ವ್ಯಾಪಾರಗಾರರು ದಿನಸಿ ವ್ಯವಹಾರ ಮಾಡುತ್ತಾ ಇದ್ದರೆ ಅಂಥಹವರಿಗೂ ಕೂಡ ಅದರಲ್ಲಿ ಲುಕ್ಸಾನು ಆದರೆ ಸರ್ಕಾರ ಧನಸಹಾಯ ಕೊಡುತ್ತೀರಾ ?

ಶ್ರೀ ಬಿ. ಎರ್. ಗೌಡ.—ಆ ರೀತಿ ಕೊಡತಕ್ಕ ಯೋಚನೆ ಸರ್ಕಾರಕ್ಕೆ ಇಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್.—ಸಾಲಕ್ಕಿಂತ ಧನ ಸಹಾಯವೇ ಹೆಚ್ಚಾಗಿದೆ. ರಾಜ್ಯದಲ್ಲಿ ಎಲ್ಲ ಸಹಕಾರ ಸಂಘಗಳು ಕೇಳುವಂಥ ಧನ ಸಹಾಯವನ್ನು ಸಿಬ್ಬಂದಿ ಬಗ್ಗೆ ಎಂದು ಕೊಡುತ್ತೀರಿ. 30,964 ರೂಪಾಯಿಗಳನ್ನು ದರಗಳ ಏರಿಳಿತಕ್ಕಾಗಿ ಎಂದು ಈ ಸಹಕಾರ ಸಂಘಕ್ಕೆ ಕೊಟ್ಟಿದ್ದೀರಿ. ನನಗೆ ತಿಳಿದಮಟ್ಟಿಗೆ ರಾಜ್ಯದಲ್ಲಿ ಯಾವ ಸಹಕಾರ ಸಂಘಕ್ಕೂ ಈ ರೀತಿ ಕೊಟ್ಟಿಲ್ಲ, ಈ ಸಹಕಾರ ಸಂಘಕ್ಕೆ ಮಾತ್ರ ಕೊಟ್ಟಿದ್ದೀರಲ್ಲವೇ ?

ಶ್ರೀ ಬಿ. ಎಲ್. ಗೌಡ.—ಮೊದಲನೆಯದಾಗಿ ಮಾನ್ಯ ಸದಸ್ಯರು ಹೇಳಿದಂತೆ ಸಾಲಕ್ಕಿಂತ ಸಹಾಯ ಧನವನ್ನು ಹೆಚ್ಚಾಗಿ ಕೊಟ್ಟಿಲ್ಲ. ಬೇರೆ ಸಹಕಾರ ಸಂಘಗಳಿಗೆ ಸಹ ಬೆಲೆಗಳ ಏರಿಳಿತಕ್ಕಾಗಿ ಸಹಾಯ ಧನವನ್ನು ಕೊಟ್ಟಿದ್ದೇವೆ. ಯಾವಯಾವದಕ್ಕೆ ಕೊಟ್ಟಿದ್ದೇವೆ ಎನ್ನುವ ಮಾಹಿತಿ ಇಲ್ಲ.

ಶ್ರೀ ಎನ್. ಎಲ್. ಬೆಲ್ಲದ.—ಇದೇ ಸಂಘ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ 2,47,000 ರೂಪಾಯಿಗಳನ್ನು ಕೊಡಬೇಕಾಗಿದೆ, ಸರ್ಕಾರಕ್ಕೆ ಒಂದು ಲಕ್ಷ ರೂಪಾಯಿ ಕೊಡಬೇಕಾಗಿದೆ. ಧನ ಸಹಾಯವನ್ನು ಕೊಟ್ಟು ಪ್ರೋತ್ಸಾಹ ಮಾಡಿ ಸಹಾಯ ಮಾಡಿದ್ದರೂ ಸಹ ಅವರಲ್ಲಿ ಯಾವ ಹಣವೂ ಇಲ್ಲ. ಆದ್ದರಿಂದ ಈ ಸಂಘವನ್ನು ಏಕೆ ಸೂಪರ್‌ಸೀಡ್ ಮಾಡಬಾರದು ?

ಶ್ರೀ ಬಿ. ಎಲ್. ಗೌಡ.—ಹಿಂದೆ ಇಂಥ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದಾಗ ಅವರಿಗೆ ಹೇಳಿದ್ದೇನೆ, ಸಹಕಾರ ಸಂಘದ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿಸುತ್ತಿದ್ದೇವೆ, ಆಡಿಟ್ ವರದಿ ಬಂದ ತಕ್ಷಣ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು. ಸಹಕಾರ ಮಾರ್ಕೆಟಿಂಗ್ ಸೊಸೈಟಿ ಸುಸ್ತಿಯಲ್ಲಿದೆ ಎನ್ನುವುದು ಗೊತ್ತಿದೆ.

## Amount spent on Construction of Work-shed by the Tumminakatte Villags Industries Society

566. **Sri N. L. BELLAD** (Ranibennur).—

Will the Minister for Development be pleased to state :—

(*a*) the amount of loan and subsidy given by Khadi Board to Village Industries Society of Tumminakatte village, Ranibennur taluk for the construction of workshed ;

(*b*) whether the exact expenditure incurred in respect of the said building will be intimated by getting the value of the building estimated by the experts of PWD ?

**Sri B. L. GOWDA** (Deputy Minister for Co-operation)—

(*a*) Loan ... Rs. 2,000
Subsidy ... Rs. 2,000

(*b*) It is not found necessary.

ಶ್ರೀ ಎನ್. ಎಲ್. ಬೆಲ್ಲದ.—(ಬಿ) ಭಾಗಕ್ಕೆ ಉತ್ತರವಾಗಿ ಅವಶ್ಯಕವೆಂದು ಕಂಡು ಬರುವುದಿಲ್ಲ ಎಂದು ಹೇಳಿದ್ದಾರೆ. ಎಂದರೆ ಅಲ್ಲಿ ವರ್ಕ್‌ಷಾಪ್ ಕಟ್ಟಬೇಕಾಗಿಲ್ಲವಾದ್ದರಿಂದ ಅದರ ಬೆಲೆ ಕೊಡಿಸುವ ಅವಶ್ಯಕತೆ ಇಲ್ಲ ಎಂದು ಹೇಳುತ್ತೀರೋ ಹೇಗೆ ಸ್ವಾಮಿ ?

†ಶ್ರೀ ಬಿ. ಎಲ್. ಗೌಡ.—ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡ್ ಏನು ಷೆಡ್ ಕಟ್ಟುವುದಕ್ಕೆ ಸಾಲ ಕೊಟ್ಟಿದ್ದಾರೆ, ಅದನ್ನು ಎನ್.ಈ.ಎಸ್. ಮುಖಾಂತರ ಕಟ್ಟಿಸುತ್ತೇವೆ. ಆದ್ದರಿಂದ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಂದ ಲೆಕ್ಕ ಮಾಡಿಸುವುದು ಅನಾವಶ್ಯಕವೆಂದು ಅಭಿಪ್ರಾಯ ಪಟ್ಟಿದ್ದೇವೆ.